# ವಾಟ್ಸ್ಆ್ಯಪ್: ಬರಲಿದೆ ಎಐ ಸ್ಟಿಕ್ಕರ್

■ ಶಶಿಕುಮಾರ್ ಸಿ.

ಕೃತಕ ಬುದ್ಧಿಮತ್ತೆ (ಆರ್ಟಿಫೀಶಿಯಲ್ ಇಂಟೆಲಿಜೆನ್ಸ್–ಎಐ) ತಂತ್ರಜ್ಞಾನವು ವಾಟ್ಸ್ಆ್ಯಪ್‌ಗೆ ಕಾಲಿಡುವ ಕಾಲ ದೂರವಿಲ್ಲ. ಆ್ಯನಿಮೇಟೆಡ್ ಸ್ಟಿಕ್ಕರ್‌ಗಳನ್ನು ಒದಗಿಸುತ್ತಿರುವ ವಾಟ್ಸ್ಆ್ಯಪ್ ಶೀಘ್ರವೇ ಎಐ ಆಧಾರಿತ ಸ್ಟಿಕ್ಕರ್‌ಗಳನ್ನು ಪರಿಚಯಿಸಲಿದೆ. ಇವುಗಳನ್ನು ರಚಿಸಿ ಹಂಚಿಕೊಳ್ಳುವ ಅವಕಾಶವನ್ನೂ ಕಲ್ಪಿಸಲಿದೆ.



ಎಐ ಸ್ಟಿಕ್ಕರ್ ಫೀಚರ್ ಬಗ್ಗೆ ವಾಬೆಟಾಇನ್ಫೊ ವರದಿ ಮಾಡಿದೆ. ಈಗಾಗಲೇ ವಾಟ್ಸ್ಆ್ಯಪ್ ಎಐ ಸ್ಟಿಕ್ಕರ್‌ಗಳನ್ನು ರಚಿಸಲು ಮತ್ತು ಹಂಚಿಕೊಳ್ಳಲು ಅನುವಾಗುವಂತಹ ಫೀಚರ್ ಅಭಿವೃದ್ಧಿಪಡಿಸಿದ್ದು, ಇದರ ಪ್ರಾಯೋಗಿಕ ಪರೀಕ್ಷೆ ನಡೆಯುತ್ತಿದೆ. ಪ್ರಾಯೋಗಿಕವಾಗಿ ಆ್ಯಂಡ್ರಾಯ್ಡ್ ಬೀಟಾ ಪರೀಕ್ಷಕರಿಗೆ ಮಾತ್ರ ಸದ್ಯಕ್ಕೆ ಲಭ್ಯವಿರುವ ಈ ಫೀಚರ್, ವಾಟ್ಸ್ಆ್ಯಪ್‌ನ ನವೀಕೃತ 2.23.17.8 ಆವೃತ್ತಿಯೊಂದಿಗೆ ಎಲ್ಲರಿಗೆ ಸಿಗಲಿದೆ.




ಚಿತ್ರಕೃಪೆ: ವಾಬೆಟಾಇನ್ಫೊ

‘ಆ್ಯಂಡ್ರಾಯ್ಡ್ ಬೀಟಾ ಪರೀಕ್ಷಕರು ಸ್ಮಾರ್ಟ್‌ಫೋನ್‌ನಲ್ಲಿ ವಾಟ್ಸ್ಆ್ಯಪ್ ಕೀಬೋರ್ಡ್ ತೆರೆದಾಗ ಸ್ಟಿಕ್ಕರ್ ಟ್ಯಾಬ್ ಕಾಣುತ್ತದೆ. ಅದರಲ್ಲಿ ‘ಕ್ರಿಯೇಟ್’ ಎಂಬ ಹೊಸ ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದರೆ ಎಐ ಸ್ಟಿಕ್ಕರ್ ರಚಿಸಲು ಬೇಕಾದ ವಿವರಣೆಯನ್ನು ನಮೂದಿಸಲು ಕೇಳಲಾಗುತ್ತದೆ. ಇದರ ಜೊತೆಗೆ ಈ ಹಿಂದೆ ರಚಿಸಲಾದ ಎಐ ಸ್ಟಿಕ್ಕರ್‌ಗಳ ಸೆಟ್ ಅನ್ನೂ ವಾಟ್ಸ್ಆ್ಯಪ್ ಪ್ರದರ್ಶಿಸುತ್ತದೆ. ಈ ಸ್ಟಿಕರ್‌ಗಳನ್ನೂ ಬಳಕೆದಾರರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಶೇರ್ ಮಾಡಿಕೊಳ್ಳಬಹುದು’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಎಐ ತಂತ್ರಜ್ಞಾನ ಆಧಾರಿತವಾಗಿ ರಚಿಸಲಾದ ಸ್ಟಿಕ್ಕರ್‌ಗಳ ಮೇಲೆ ಬಳಕೆದಾರರು ನಿಯಂತ್ರಣ ಹೊಂದಿರುತ್ತಾರೆ. ಒಂದೊಮ್ಮೆ ಸ್ಟಿಕ್ಕರ್ ಸೂಕ್ತವಲ್ಲ ಅಥವಾ ಹಾನಿಕಾರಕ ಎಂಬುದು ಗೊತ್ತಾದರೆ ಅದನ್ನು ನೀವು ಮೆಟಾಗೆ ರಿಪೋರ್ಟ್ ಸಹ ಮಾಡಬಹುದು. ■

## ಪತ್ರಕರ್ತರಿಗೆ ಎಕ್ಸ್ ಆಫರ್



ಲೋಗೊ ಮತ್ತು ಹೆಸರು ಬದಲಿಸಿದ ಮೇಲೆ ಎಕ್ಸ್ (ಟ್ವಿಟರ್) ಅನ್ನು ಇನ್ನಷ್ಟು ಲವಲವಿಕೆಯಾಗಿಸುವ ನಿಟ್ಟಿನಲ್ಲಿ ಕಂಪನಿಯ ಮಾಲೀಕ ಎಲಾನ್ ಮಸ್ಕ್, ಪತ್ರಕರ್ತರಿಗೆ ಆದಾಯದ ಆಫರ್ ನೀಡಿದ್ದಾರೆ.

ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು, ‘ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಬರೆಯುವ ಹಾಗೂ ಹೆಚ್ಚಿನ ಹಣ ಗಳಿಸುವ ತುಡಿತವಿರುವ ಪತ್ರಕರ್ತರು ನೇರವಾಗಿ ಎಕ್ಸ್‌ಗೆ ಲೇಖನಗಳನ್ನು ಬರೆಯಬಹುದು’ ಎಂದು ಎಕ್ಸ್ (ಟ್ವೀಟ್) ಮಾಡಿದ್ದಾರೆ.

ಪತ್ರಕರ್ತರು ತಮ್ಮ ಲೇಖನಗಳನ್ನು ನೇರವಾಗಿ ಎಕ್ಸ್‌ಗೆ ಬರೆದು ಪ್ರಕಟಿಸಬೇಕು. ಹೀಗೆ ಪತ್ರಕರ್ತರು ಬರೆಯುವ ಲೇಖನಗಳನ್ನು ಓದುವವರಿಗೆ ಇಂತಿಷ್ಟು ಶುಲ್ಕವೆಂದು ನಿಗದಿಪಡಿಸಲಾಗುತ್ತದೆ. ಅದರಿಂದ ಬರುವ ಹಣವನ್ನು ಪತ್ರಕರ್ತರಿಗೆ ನೀಡಲಾಗುತ್ತದೆ.

ಪತ್ರಕರ್ತರು ಹಾಗೂ ಅವರು ಬರೆಯುವ ಲೇಖನಗಳ ಆಧಾರದ ಮೇಲೆ ಶುಲ್ಕ ನಿಗದಿಪಡಿಸಲಾಗುತ್ತದೆ. ಎಕ್ಸ್‌ನ ಚಂದಾದಾರರಲ್ಲದ ಓದುಗರಿಗೆ ಹೆಚ್ಚಿನ ಶುಲ್ಕ ವಿಧಿಸಲಾಗುತ್ತದೆ. ಯಾವ ಆಧಾರದ ಮೇಲೆ ಯಾರಿಗೆ ಎಷ್ಟು ಹಣ ನೀಡಲಾಗುತ್ತದೆ ಎಂಬ ಮಾಹಿತಿಯನ್ನು ಎಲಾನ್ ತಿಳಿಸಿಲ್ಲ. ■

## ದೇಸಿ ಬ್ರೌಸರ್: 3.4 ಕೋಟಿ ಬಹುಮಾನ



ಡಿಜಿಟಲ್ ಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆಯೂರುವ ನಿಟ್ಟಿನಲ್ಲಿ ಭಾರತವು, ಈ ಕ್ಷೇತ್ರದಲ್ಲಿ ತನ್ನದೇ ಹಿಡಿತ ಸಾಧಿಸಲು ದೇಸಿ ಬ್ರೌಸರ್ ಅಭಿವೃದ್ಧಿಗೆ ಅಡಿ ಇಟ್ಟಿದೆ. ಇದಕ್ಕಾಗಿ ದೊಡ್ಡ ಮೊತ್ತದ ಬಹುಮಾನವನ್ನೂ ನೀಡಲು ಮುಂದಾಗಿದೆ.

‘ಗೂಗಲ್ ಕ್ರೋಮ್, ಮೊಜಿಲ್ಲಾ ಫೈರ್‌ಫಾಕ್ಸ್, ಮೈಕ್ರೊಸಾಫ್ಟ್ ಎಡ್ಜ್, ಒಪೆರಾ ಬ್ರೌಸರ್‌ಗಳಂತೆ ವಿಶ್ವಮಟ್ಟದ ದೇಸಿ ಬ್ರೌಸರ್ ಅಭಿವೃದ್ಧಿಪಡಿಸುವ ದೇಶದ ಡೆವಲಪರ್‌ಗಳಿಗೆ ₹3.4 ಕೋಟಿ ಬಹುಮಾನ ನೀಡಲು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನಿರ್ಧರಿಸಿದೆ. ಈ ಬ್ರೌಸರ್ ಯಾವುದೇ ಸೈಬರ್ ದಾಳಿಗೆ ತುತ್ತಾಗದು ಎಂಬುದಕ್ಕೆ ನೀಡಲಾಗುವ ಎಸ್‌ಎಸ್‌ಎಲ್ ಸರ್ಟಿಫಿಕೇಟ್ ಪಡೆಯಬೇಕು’ ಎಂದು ಈಚೆಗೆ ದಿ ಹಿಂದೂ ವರದಿ ಮಾಡಿದೆ.

‘ದೊಡ್ಡ ಮಟ್ಟದ ಆರ್ಥಿಕತೆಯತ್ತ ದಾಪುಗಾಲು ಹಾಕುತ್ತಿರುವ ಭಾರತಕ್ಕೆ ತನ್ನದೇ ಆದ ಡಿಜಿಟಲ್ ಪಥವನ್ನು ಹೊಂದುವುದು ಅತ್ಯಗತ್ಯವಾಗಿದೆ. ಹೀಗಾಗಿ, ದೇಶದ ಭದ್ರತೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ವಿದೇಶಿ ಬ್ರೌಸರ್‌ಗಳ ಮೇಲಿನ ಅವಲಂಬನೆಯನ್ನು ಆದಷ್ಟು ತ್ವರಿತವಾಗಿ ಕಡಿಮೆ ಮಾಡಬೇಕು. ಇದರ ಮುನ್ನುಡಿಯಾಗಿ ದೇಸಿ ಬ್ರೌಸರ್ ಅಗತ್ಯವಿದೆ’ ಎಂದಿದ್ದಾರೆ ಸಚಿವಾಲಯದ ಅಧಿಕಾರಿಗಳು. ■